**ದಿನಾಂಕ: 07.05.2022 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 180 ಬನಶಂಕರಿ ದೇವಸ್ಥಾನ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ಸತೀಶ್ ಕುಮಾರ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಮಂಜುನಾಥ್ ವೆಂಕಣ್ಣ ನಾಯಕ – ಸಹಾಯಕ ಅಭಿಯಂತರರು (ವಾಡ್ 180 ಬನಶಂಕರಿ ದೇವಸ್ಥಾನ) (ಕಿಯೋನಿಕ್ಸ್)
3. ಶ್ರೀ. ಶಿವರುದ್ರಯ್ಯ – ಹಿ.ಆ.ಪ (ವಾಡ್ 180 ಬನಶಂಕರಿ ದೇವಸ್ಥಾನ)
4. ಶ್ರೀ. ಎಸ್. ಬಿ. ಸಿಂಗ್ – ಕಿ.ಆ.ಪ (ವಾಡ್ 180 ಬನಶಂಕರಿ ದೇವಸ್ಥಾನ)

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 180 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು (ಕಿಯೋನಿಕ್ಸ್) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಈ ಹಿಂದಿನ ಸಭೆಯಲ್ಲಿ ನಡೆಯದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿದೆ. ಅಧಿಕಾರಿಗಳಿಗೆ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ಅಹಮದ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಯಾರಬ್‌ನಗರ, ಸರಬಂಡೇಪಾಳ್ಯ, ಪ್ರಗತಿಪುರ, ಗಂಗಾಧರನಗರ, ಟೀಚರ್ಸ್‌ಕಾಲೋನಿ, ಉಮಾರ್‌ಭಾಗ್‌ಲೇಔಟ್ ವ್ಯಾಪ್ತಿಯಲ್ಲಿ ಜನದಟ್ಟನೆ ಅಧಿಕವಾಗಿದ್ದು ಸದರಿ ಪ್ರದೇಶದ ಕಸದ ಪಾಯಿಂಟ್‌ಗಳಲ್ಲಿ ಕಸದ ಪ್ರಮಾಣ ಹೆಚ್ಚಾಗಿರುತ್ತದೆ. ಇದರಿಂದ ಕೋವಿಡ್–19 ಹರಡುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು. ಸದರಿ ಸ್ಥಳದಲ್ಲಿ ಘನತ್ಯಾಜ್ಯವನ್ನು ಸ್ವಚ್ಛತೆಗೊಳಿಸಿ ಹಾಗೂ ಸದರಿ ಸ್ಥಳಗಳಲ್ಲಿ ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

**ಕ್ರಮ: ಆರೋಗ್ಯಾಧಿಕಾರಿಗಳು (ಪದ್ಮನಾಭನಗರ)**

2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.

ಕೆ.ಪಿ. ಅಬ್ದುಲ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಸರಬಂಡೆಪಾಳ್ಯ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಪೈಪ್‌ಗಳನ್ನು ಅಳವಡಿಸಲು ರಸ್ತೆಯನ್ನು ಅಗೆದಿರುವುದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಸದರಿ ಕಾಮಗಾರಿಯನ್ನು ಜರೂರಾಗಿ ಮುಕ್ತಾಯಗೊಳಿಸುವಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ರವರಿಗೆ ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ & ಸ.ಅ (ಬಿಡಬ್ಲ್ಯೂಎಸ್‌ಎಸ್‌ಬಿ)**

3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಡೆಬ್ರಿಸ್ ವಿಲೇವಾರಿ ಬಗ್ಗೆ.

ಸ್ಥಳೀಯರು ಸುಬ್ರಮಣ್ಯಪುರ ಮುಖ್ಯರಸ್ತೆ (ಡಾ॥ ವಿಷ್ಣುವರ್ಧನ್ ರಸ್ತೆ) ಯಲ್ಲಿ ಪಿಸ್‌ಟಿಐ ಕಾಂಪೌಂಡ್ ಹತ್ತಿರ ಇರುವ ಸಾರ್ವಜನಿಕ ಶೌಚಾಲಯ ಪಕ್ಕದಲ್ಲಿ ಹಾಗೂ ಹೊರ ವರ್ತುಲ ರಸ್ತೆ ಮತ್ತು ಗಂಗಾಧರನಗರ ಮುಖ್ಯರಸ್ತೆಯಲ್ಲಿ ಕಸ ಮತ್ತು ಡೆಬ್ರಿಸ್ ಇರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಕೂಡಲೇ ಕ್ರಮವಹಿಸಲು ಸೂಚಿಸಲಾಯಿತು.

**ಕ್ರಮ: ಸ.ಅ (ವಾರ್ಡ್ – 180) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು**

4. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.

ವಾರ್ಡ್ ವ್ಯಾಪ್ತಿಯ ಸರಬಂಡೇಪಾಳ್ಯ ಮುಖ್ಯರಸ್ತೆ, 2ನೇ, 4ನೇ, 5ನೇ ಮತ್ತು 7ನೇ ಅಡ್ಡರಸ್ತೆಯಲ್ಲಿ ರಸ್ತೆಗುಂಡಿಗಳು ಇದ್ದು ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ರಸ್ತೆ ಅಗೆತಗಳು ಇರುವುದರಿಂದ ಸಾರ್ವಜನಿಕ ವಾಹನ ಸವಾರರಿಗೆ ಓಡಾಡಲು ತುಂಬಾ ಕಷ್ಟಕರವಾಗಿರುತ್ತದೆ. ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಗಂಗಮ್ಮ ದೇವಸ್ಥಾನದ ಹತ್ತಿರ ಡೆಬ್ರಿಸ್ ಹಾಕಲಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ. ಆದ್ದರಿಂದ ರಸ್ತೆಗುಂಡಿಗಳನ್ನು ಮುಚ್ಚಲು ಸಹಾಯಕ ಅಭಿಯಂತರರು – ವಾರ್ಡ್ ಸಂಖ್ಯೆ 180 ಹಾಗೂ ಡೆಬ್ರಿಸ್ ಅನ್ನು ತೆರವುಗೊಳಿಸಲು ಸಹಾಯಕ ಅಭಿಯಂತರು – ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸೂಚಿಸಲಾಯಿತು.

**ಕ್ರಮ: ಸ.ಅ (ವಾರ್ಡ್ 180) & ಸಹಾಯಕ ಅಭಿಯಂತರು – ಬಿಡಬ್ಲ್ಯೂಎಸ್‌ಎಸ್‌ಬಿ**

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಸತೀಶ್ ಕುಮಾರ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Satishkumar

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 180
ಬನಶಂಕರಿ ದೇವಸ್ಥಾನ